ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1539 (1808)

2) ಸದಸ್ಯರ ಹೆಸರು : ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನ ಸಭೆಯಿಂದ ಚುನಾಯಿತರಾದವರು)

3) ಉತ್ತರಿಸುವ ದಿನಾಂಕ : 22.03.2021

4) ಉತ್ತರಿಸುವವರು : ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ಕೋತಿಗಳ ಹಾವಳಿ ಹೆಚ್ಚಾಗಿದ್ದು, ಇದರಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಹಾಗೂ ರೈತರ ಬೆಳೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ತೆಗೆದುಕೊಂಡ ಕ್ರಮವೇನು;	ಬಂದಿದೆ. 2020-21ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 265 ರಡಿ ಮಂಗಗಳ ಪುನರ್ ವಸತಿಗಾಗಿ ಮತ್ತು ಮಂಗಗಳ ಸಂತತಿಯನ್ನು ನಿಯಂತ್ರಿಸುವ ದೃಷ್ಟಿಯಿಂದ **ರೂ.6.25 ಕೋಟಿ** ವೆಚ್ಚದಲ್ಲಿ 05 (ಐದು) ವರ್ಷಗಳ ಯೋಜನೆಯನ್ನು ಘೋಷಿಸಿದ್ದು, ಪೂರ್ವ ಸಿದ್ಧತೆಗಾಗಿ ಮೊದಲನೇ ಹಂತದಲ್ಲಿ ಬಿಡುಗಡೆಯಾದ ರೂ.25.00 ಲಕ್ಷಗಳಿಂದ ಅಗತ್ಯವಿರುವ ಈ ಕೆಳಗಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. ➢ ರೂ.0.640 ಲಕ್ಷಗಳ ವೆಚ್ಚದಲ್ಲಿ ಮಂಗಗಳನ್ನು ಸೆರೆಹಿಡಿಯಲು ಪಂಜರ (Cages)ಗಳನ್ನು ಖರೀದಿಸಲಾಗಿದೆ. ➢ ರೂ.0.650 ಲಕ್ಷಗಳ ವೆಚ್ಚದಲ್ಲಿ ಮಂಗಗಳ ಸಂತಾನ ಹರಣ ಶಸ್ತ್ರಚಿಕಿತ್ಸೆಗಾಗಿ 12 ಜನ ಪಶು ವೈದ್ಯಾಧಿಕಾರಿಗಳಿಗೆ ತರಬೇತಿ ವೆಚ್ಚ ನೀಡಲಾಗಿದೆ. ➢ ಸೆರೆಹಿಡಿದ ಮಂಗಗಳನ್ನು ಪಶುವೈದ್ಯಕೀಯ ಕಾಲೇಜ್‌ಗೆ ಕೊಂಡೊಯ್ದು, ಸಂತಾನಹರಣ ಶಸ್ತ್ರಚಿಕಿತ್ಸೆಗೆ ಒಳಪಡಿಸಿ, ಚಿಕಿತ್ಸೆಯ ನಂತರ ಅವುಗಳ ಆಹಾರ ಮತ್ತು ಔಷದೋಪಚಾರ ಮಾಡಿ 2-3 ದಿನಗಳ ಕಾಲ ಅವುಗಳನ್ನು ಸೂಕ್ತ ನಿಗಾದಲ್ಲಿಟ್ಟು, ಗುಣಮುಖ ಹೊಂದಿರುವುದನ್ನು ಖಚಿತ ಪಡಿಸಿಕೊಂಡ ನಂತರ ಮರಳಿ ಕಾಡಿಗೆ ಬಿಟ್ಟ ಉದ್ದೇಶಕ್ಕೆ, ನಿಗದಿಯಾದ ರೂ.3.150 ಲಕ್ಷಗಳಲ್ಲಿ **ರೂ.0.323 ಲಕ್ಷಗಳ** ವೆಚ್ಚ ಭರಿಸಿದೆ. ➢ ಸೆರೆಹಿಡಿದ ಮಂಗಗಳ ಸಂತಾನಹರಣ ಚಿಕಿತ್ಸೆಗಾಗಿ ಅಗತ್ಯವಿರುವ ತಾಂತ್ರಿಕತೆಯಿಂದ ಕೂಡಿದ ಸುಸಜ್ಜಿತ ಮೊಬೈಲ್ ವಾಹನ (Purchase of mobile vehicle and fabrication of mobile operation units including purchase of equipments required for sterilization of monkeys at Shivamogga. (Including food charges) ಖರೀದಿಸಲು ರೂ.18.000 ಲಕ್ಷಗಳ ವೆಚ್ಚ ಭರಿಸಿದೆ.

ಕ್ರ.ಸಂ	ಪ್ರಶ್ನೆ	ಉತ್ತರ
		ಈಗಾಗಲೇ ಬಿಡುಗಡೆಯಾದ ಅನುದಾನ ರೂ.25.00 ಲಕ್ಷಗಳ ಬಾಬ್ತು ತಾಂತ್ರಿಕ ವಾಹನ ನಿರ್ಮಾಣ ಮಾಡಿ ಈ ವಿಭಾಗಕ್ಕೆ ಒದಗಿಸಲು ರೂ.18.00 ಲಕ್ಷಗಳನ್ನು ಪ್ರಾಯೋಜನಾ ನಿರ್ದೇಶಕರು, ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆ, ಪಶುಪಾಲನಾ ಇಲಾಖೆ ಬೆಂಗಳೂರು ಇವರ ಮೂಲಕ ವೆಚ್ಚ ಭರಿಸಲಾಗಿದೆ. ಸೆರೆಹಿಡಿದ ಮಂಗಗಳ ಸಂತಾನಹರಣ ಚಿಕಿತ್ಸೆಗೆ ಸುಸಜ್ಜಿತ ಮೊಬೈಲ್ ವಾಹನವನ್ನು ಪ್ರಾಯೋಜನಾ ನಿರ್ದೇಶಕರು, ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆ, ಪಶುಪಾಲನಾ ಇಲಾಖೆ ಬೆಂಗಳೂರು ರವರು ಒದಗಿಸಿದ ನಂತರ ಹಾವಳಿ ಮಾಡುವ ಮಂಗಗಳನ್ನು ಸೆರೆಹಿಡಿದು ಅವುಗಳಿಗೆ ಸಂತಾನಹರಣ ಚಿಕಿತ್ಸೆ ಮಾಡಿ ಪುನ: ಕಾಡಿಗೆ ಬಿಡುವ ಕ್ರಮವನ್ನು ಕೈಗೊಳ್ಳಲಾಗುತ್ತಿದೆ.
ಆ)	ಕೋತಿಗಳ ಹಾವಳಿಯನ್ನು ತಡೆಗಟ್ಟಲು ಶಾಶ್ವತ ಪರಿಹಾರಕ್ಕೆ ಸರ್ಕಾರವು ಯೋಜನೆ ರೂಪಿಸಿದೆಯೇ;	2020–21ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 265 ರಡಿ ಮಂಗಗಳ ಪುನರ್‌ವಸತಿಗಾಗಿ ಮತ್ತು ಮಂಗಗಳ ಸಂತತಿಯನ್ನು ನಿಯಂತ್ರಿಸುವ ದೃಷ್ಟಿಯಿಂದ **ರೂ.6.25 ಕೋಟಿ** ವೆಚ್ಚದಲ್ಲಿ 05 (ಐದು) ವರ್ಷಗಳ ಯೋಜನೆಯನ್ನು ಘೋಷಿಸಿದ್ದು, ಪೂರ್ವಸಿದ್ದತೆಗಾಗಿ ಪ್ರಥಮ ಹಂತದಲ್ಲಿ ಶಿವಮೊಗ್ಗ ವೃತ್ತದ ಸಾಗರ ಅರಣ್ಯ ವಿಭಾಗಕ್ಕೆ ರೂ.25.00 ಲಕ್ಷ ಅನುದಾನವನ್ನು ಹಂಚಿಕೆ ಮಾಡಿ ಬಿಡುಗಡೆಗೊಳಿಸಲಾಗಿರುತ್ತದೆ.
ಇ)	ಕೋತಿಗಳ ಹಾವಳಿ ತಪ್ಪಿಸಲು ಸಾಗರದಲ್ಲಿ ಟ್ರೀ ಪಾರ್ಕ್ / ಮಂಕಿ ಪಾರ್ಕ್ ನಿರ್ಮಾಣದ ಬಗ್ಗೆ ಸರ್ಕಾರ ತೆಗೆದು ಕೊಂಡಿರುವ ಕ್ರಮವೇನು?	ಕೋತಿಗಳ ಹಾವಳಿ ತಪ್ಪಿಸಲು ಸಾಗರದಲ್ಲಿ ಮಂಕಿ ಪಾರ್ಕ್ ನಿರ್ಮಾಣದ ಬಗ್ಗೆ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ: ಎರಡು ಹಂತದಲ್ಲಿ ಸ್ಥಳ ಆಯ್ಕೆ ಬಗ್ಗೆ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಸ್ಥಳೀಯರ ವಿರೋಧ ವ್ಯಕ್ತವಾದ ಹಿನ್ನಲೆಯಲ್ಲಿ, ಜನಪ್ರತಿನಿಧಿಗಳ ಸೂಚನೆ ಹಾಗೂ ಕೋರಿಕೆಯಂತೆ, ಸಮಸ್ಯಾತ್ಮಕ ಮಂಗಗಳನ್ನು ಹಿಡಿದು ಸಂತಾನಹರಣ ಚಿಕಿತ್ಸೆಗೊಳಪಡಿಸಿ, ಅವುಗಳನ್ನು ಪುನ: ಕಾಡಿಗೆ ಬಿಡಲು ಕ್ರಮಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಅಪಜೀ 73 ಎಫ್‌ಡಬ್ಲ್ಯೂಎಲ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು